

# ಅಪರೂಪದ ಬೀಜ ಕಲಾಕೃತಿಗಳ ಅನಾವರಣ

**ಮನೆಯಲ್ಲೇ ಬೆಳೆಯುವ ಉಪಯುಕ್ತ ತರಕಾರಿ, ಅನುಪಯುಕ್ತ ಕಳೆ ಬೀಜಗಳನ್ನು ಬಳಸಿ ಅದ್ಭುತ ಕಲಾಕೃತಿಗಳನ್ನು ರಚಿಸಿದ್ದಾರೆ ಶಿವಮೊಗ್ಗದ ಜ್ಯೋತಿ ಮಹೇಶ್. ಅವರ ಪ್ರತಿ ಕಲಾಕೃತಿಯೂ ಒಂದಕ್ಕಿಂತ ಒಂದು ಭಿನ್ನ.**

**■ ಅಖಿಲೇಶ್ ಚಿಪ್ಪಳಿ**





ಮಲೆನಾಡಿನಲ್ಲಿ ಮಳೆಗಾಲ ನೂರಾರು ಸಸ್ಯವೈವಿಧ್ಯಗಳನ್ನು ಸೃಷ್ಟಿಸುತ್ತದೆ. ಈ ಸಸ್ಯವೈವಿಧ್ಯವನ್ನೇ ಅವಲಂಬಿಸಿ ಬದುಕುವ ಅಸಂಖ್ಯ ಕೀಟವೈವಿಧ್ಯಗಳ ಜೊತೆಗೆ ಅಗಣಿತ ಜೀವಿವೈವಿಧ್ಯದ ಖಜಾನೆಯು ತುಂಬಿ ತುಳುಕುತ್ತದೆ.

ಹಳ್ಳಿ ದಾರಿ ಬದಿಯಲ್ಲಿ ಹುಟ್ಟುವ ಯಲೆಯುರಿಗೆ ಗಿಡ, ತೋಟದ ಮಣ್ಣಿನ ಬುಡದಲ್ಲಿ ಬೆಳೆಯುವ ಸೋರಲೆ ಗಿಡ, ನೀರು ಹರಿಯುವ ಚರಂಡಿಯಲ್ಲೇ ಬೆಳೆಯುವ ಚಗಟೆ ಗಿಡ, ಕೆಸ– ಹೀಗೆ ಸಸ್ಯವೈವಿಧ್ಯಗಳನ್ನು ಸಂಪೂರ್ಣವಾಗಿ ದಾಖಲಿಸಲು ಇನ್ನೂ ಸಾಧ್ಯವಾಗಿಲ್ಲ. ಇದೇ ತರಹ ಗೊಬ್ಬರ ಗುಂಡಿಯಂಚಿನಲ್ಲಿ ಹುಟ್ಟಿ, ಗೇಣುದ್ದ, ಮೊಳದುದ್ದ, ಮಾರುದ್ದ ಬೆಳೆಯುತ್ತ, ಹಲವು ಮೀಟರುಗಳಷ್ಟು ಬೆಳೆಯುವ ಸೌತೆ ಜಾತಿಗೆ ಸೇರಿದ ಹಾಗೂ ಮಿನಿ ಸೌತೆಯಂತೆ ತೋರುವ ಕಹಿಹಿಂಡ್ಲೆ ಬಳ್ಳಿಯು ನೂರಾರು ಕಾಯಿಗಳನ್ನು ತನ್ನೊಡಲಲ್ಲಿ ಬೆಳೆಸುತ್ತದೆ. ಕಾರ್ಕೋಟಕ ವಿಷದಷ್ಟು ಕಹಿಯಾದ, ಚಿಕ್ಕ ಕಾಯಿಗಳಿಂದ ಯಾವ ಉಪಯೋಗವಿದೆಯೆಂದು ಬಹಳ ಜನರ ಅರಿವಿನಲ್ಲಿ ಕಹಿಹಿಂಡ್ಲೆ ಇಲ್ಲ. ಔಷಧಕ್ಕೆ ಬಾರದ ಸಸ್ಯವಿಲ್ಲ ಎಂದು ಹಿರೀಕರು ಹೇಳುತ್ತಾರೆ. ನಮ್ಮ ಅರಿವಿಗೆ ನಿಲುಕದ್ದನ್ನು, ಅದು ಸುಳ್ಳಿರಬಹುದು ಎಂದು ತಳ್ಳಿ ಹಾಕುವಂತಿಲ್ಲ. ಇರಲಿ, ಒಂದು ಕಹಿಹಿಂಡ್ಲೆ ಅಥವಾ ಹಿಂಡ್ಲಚ್ಚೆ ಕಾಯಿಯಲ್ಲಿ ಎಷ್ಟು ಬೀಜವಿರಬಹುದು? ಆ ಬೀಜದ ಉಪಯೋಗವೇನು ಇತ್ಯಾದಿಗಳೆಲ್ಲಾ ಆಚೆಗಿಡೋಣ.

ಕಹಿಹಿಂಡ್ಲೆ ಹಣ್ಣಿನ ಬೀಜಗಳನ್ನು ಉಪಯೋಗಿಸಿಕೊಂಡು ಅತ್ಯದ್ಭುತ ಕಲಾಕೃತಿಯೊಂದು ನಿಮ್ಮೆದುರಿಗೆ ಇದೆ. ಹೆಚ್ಚೂ ಕಡಿಮೆ ಅಕ್ಕಿಕಾಳಿನಷ್ಟೇ ಚಿಕ್ಕದಿರುವ, ಅಸಂಖ್ಯ ಬೀಜಗಳನ್ನು ಬಳಸಿಕೊಂಡು ದೀಪದಾರತಿಯೊಂದು ತಯಾರಾಗುತ್ತದೆ. ಸಾವಿರ ಸಂಖ್ಯೆಯ ಬೀಜಗಳನ್ನು ಬಿಡಿಸಿ, ತೊಳೆದು, ಒಣಗಿಸಿ, ಒಪ್ಪವಾಗಿ ಜೋಡಿಸಿ ಕಲಾಕೃತಿ ತಯಾರಿಸುವುದಿದೆಯಲ್ಲ, ಅದಕ್ಕೆ ಅಪಾರ ತಾಳ್ಮೆ ಬೇಕು, ಅಪರಿಮಿತ ಶ್ರಮ ಹಾಕಬೇಕು, ಕಲಾಕೃತಿ ರಚಿಸಲು ಸೃಜನಶೀಲತೆಯಂತೂ ಮೊದಲಿಗೆ ಇರಬೇಕು.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿ ಕಟ್ಟಿನಕೆರೆಯೆಂಬ ಊರಿದೆ. ಮಲೆನಾಡಿನ ಎಲ್ಲಾ ಭಾಗಗಳಲ್ಲಿರುವಂತೆ ಇದೊಂದು ಚಿಕ್ಕ ಊರು. ಜೀವನೋಪಾಯಕ್ಕೆ ಅಂತ ಇರುವುದು ಅಡಿಕೆ ಬೆಳೆ. ಬಹಳಷ್ಟು ಅಡಿಕೆ ಬೆಳೆಗಾರರು ಚಿಕ್ಕ ಹಿಡುವಳಿ ಹೊಂದಿದ್ದರೂ, ಇರುವುದರಲ್ಲೇ ಬದುಕು ಕಟ್ಟಿಕೊಂಡು ನೆಮ್ಮದಿಯಿಂದ ಇರುವಂತೆ ಪ್ರಕೃತಿಯೇ ಇವರಿಗೆ ನೀಡಿರಬೇಕು. ಬಿಡುವಿನ